# 5

# ಆತನ ವೇಳಾಪಟ್ಟಿಯು ಭೂಲೋಕದ ಮೇಲೆ ಕುಮಾರನ ದೈವತ್ವವನ್ನು ಪ್ರತಿಬಿಂಬಿಸುತ್ತದೆ

ಯೇಸುವು ದೇವತ್ವದಂತೆ, ದೇವರ ಕುಮಾರನಂತೆ ತನ್ನ ವ್ಯಕ್ತಿತ್ವದ ಬಗ್ಗೆ ತಿಳುವಳಿಕೆ ಉಳ್ಳವನಾಗಿದ್ದನು. ಪ್ರಾರಂಭದ ವಯಸ್ಸಿನಲ್ಲಿಯೇ ಆತನು ಆಯ್ಕೆ ಮಾಡಲ್ಪಟ್ಟಾತನು (ಮೆಸ್ಸೀಯನು) ಎಂಬುದನ್ನು ಆತನು ತಿಳಿದಿದ್ದನು. ಸಹಜವಾಗಿ, ಯೇಸುವು ತನ್ನ ವ್ಯಕ್ತಿತ್ವವದ ಎರಡು ಮುಖಗಳನ್ನು ತನ್ನ ವೈಯಕ್ತಿಕ ಸೇವಾಕಾರ್ಯದ "ವೇಳಾ ಪಟ್ಟಿಯೊಳಗೆ" ಪ್ರಕಟಿಸುವದನ್ನು ಹಿಂದಿಡಲು ಪ್ರಯತ್ನಿಸಿದನು. ಇದು ಸುಲಭವಾದ ಕಾರ್ಯವಾಗಿರಲಿಲ್ಲ. ಯೇಸು ತನ್ನ ವ್ಯಕ್ತಿತ್ವವನ್ನೂ ಸ್ಥಾನವನ್ನೂ ಸಂಪೂರ್ಣವಾಗಿ ಗೌಪ್ಯ ವಾಗಿಡದಿದ್ದರೂ ಅವುಗಳ ಮಹತ್ವದ ಬಗೆಗಿನ ಜಗತ್ತಿನ ಬೆಳೆಯುತ್ತಿರುವ ತಿಳುವಳಿಕೆಯನ್ನು ನಿಯಂತ್ರಿಸಿದನು. ಯೇಸು ಇದನ್ನು ಮಾಡಿದ ಎರಡು ಮಹತ್ವದ ಮಾರ್ಗಗಳನ್ನು ಪರೀಕ್ಷಿಸೋಣ.

## ಯೇಸು ತನ್ನ ವ್ಯಕ್ತಿತ್ವವನ್ನು ಹೇಗೆ ಗೌಪ್ಯವಾಗಿ ಇಟ್ಟನು

ಮೊದಲನೆಯದು, ತನ್ನ ವ್ಯಕ್ತಿತ್ವವನ್ನು ಗೌಪ್ಯದಲ್ಲಿಡುವರಿಂದ ಇತರರ ತಿಳುವಳಿಕೆಯನ್ನು ನಿಯಂತ್ರಣದಲ್ಲಿಡಲು ಯೇಸುವು ಪ್ರಯತ್ನಿಸಿದನು. ಯೇಸುವು "ಸೂಚಕ ಕಾರ್ಯಗಳನ್ನು" *(semeia)* ಮಾಡಿದಾಗ, "ಯೇಸು ದೇವಕುಮಾರನಾದ ಕ್ರಿಸ್ತನೆಂದು ನೀವು ನಂಬುವಂತೆಯೂ ನಂಬಿ ಆತನ ಹೆಸರಿನ ಮುಖಾಂತರ ಜೀವವನ್ನು ಪಡಕೊಳ್ಳುವಂತೆಯೂ ಇಷ್ಟೆಲ್ಲಾ ಬರೆದದೆ" (ಯೋಹಾನ 20:31). ಹಾಗಿದ್ದರೂ ಯೋಹಾನನ ಸುವಾರ್ತೆಯಲ್ಲಿ ಯೇಸು ಮಾಡಿದ ಮೊದಲನೆಯ ಸೂಚಕ ಕಾರ್ಯವು ಆತನ ತಾಯಿಯ ಒತ್ತಾಯದಿಂದ ಮಾಡಿದ್ದಾಗಿತ್ತು. ಯಾಕೆ? ಯಾಕಂದರೆ ಮಾಡಲು ಆತನ "ಸಮಯವು ಇನ್ನೂ ಬಂದಿರಲಿಲ್ಲ" (ಯೋಹಾನ 2:4). ಅನೇಕ ಕಾರಣಗಳಿಂದ ಯೇಸುವು ತನ್ನ ದೈವಿಕ ಶಕ್ತಿಯನ್ನು ಬಹಿರಂಗಪಡಿಸುವದರಲ್ಲಿ ಜಾಗ್ರತೆಯಿಂದ ಇದ್ದನು: (1) ತನ್ನ ಬಲವು ದೇವರ ಬಲದಂತೆ ಕಾಣಲ್ಪಡುವ ಅವಶ್ಯಕತೆಯಿಲ್ಲವೆಂದು ಆತನು ತಿಳಿದಿದ್ದನು (ಮತ್ತಾಯ 12:24). (2) "ಅದ್ಭುತ ಕಾರ್ಯಗಳ, ಆಶ್ಚರ್ಯ ಕಾರ್ಯಗಳ ಹಾಗೂ ಸೂಚಕ ಕಾರ್ಯಗಳ" ತಳಹದಿಯ ಮೇಲೆ ಮಾತ್ರವೇ ನಂಬಿಕೆಯಿಡುವುದು ಸಾಕಷ್ಟಾಗುವದಿಲ್ಲವೆಂದು ಆತನು ತಿಳಿದಿದ್ದನು[1] (ಅಪೊಸ್ತಲರ ಕೃತ್ಯ 2:22). (3) "ಮಹಾ ಆಶ್ಚರ್ಯ ಕಾರ್ಯಗಳೂ ಸೂಚಕಕಾರ್ಯಗಳೂ" "ಸುಳ್ಳು ಕ್ರಿಸ್ತರಿಂದಲೂ ಹಾಗೂ ಸುಳ್ಳು ಪ್ರವಾದಿಗಳಿಂದಲೂ" ಮೋಸಕರವಾದ ಬಲವುಳ್ಳ ಸಾಧನಗಳಾಗಿ ಉಪಯೋ ಗಿಸಲ್ಪಡುವವು ಎಂದು ಯೇಸು ತಿಳಿದಿದ್ದನು (ಮತ್ತಾಯ 24:24, 25). (4) ಆತನ

ರಾಜ್ಯಕ್ಕಾಗಿ ಅಸ್ತಿವಾರ ಹಾಕುವದಕ್ಕಾಗಿ ತನ್ನ ವೇಳಾಪಟ್ಟಿಯನ್ನು ಮೀರಿ ಜನರು ಓಡಬಾರದೆಂದು ಆತನು ಬಯಸಿದನು.

ಯೇಸುವು ಸೂಚಕ ಕಾರ್ಯಗಳನ್ನು ಆಗಾಗ ಉಪಯೋಗಿಸಿಕೊಂಡನು. ಆತನು ಹಾಗೆ ಮಾಡಿರದಿದ್ದರೆ ಆತನು ಪ್ರಸಿದ್ಧನಾಗುತ್ತಿದ್ದನೋ ಎಂದು ಸಹಜವಾಗಿ ಹೇಳಬಹುದು. ಅನೇಕ ಸಲ ಆತನ ಮಹಾ ಸಹಾನುಭೂತಿಯು ಆತನು ಕಾರ್ಯನಡಿಸುವಂತೆ ಮಾಡಿತು.[2] ಬಹಳ ಸಲ ಆತನು ಅದ್ಭುತಕಾರ್ಯಗಳನ್ನು ರಹಸ್ಯವಾಗಿ ಇಡಬೇಕೆಂದು ವಿಶೇಷವಾಗಿ ವಿನ್ನವಿಹಿಸಿಕೊಂಡನು (ಮತ್ತಾಯ 8:3, 4; 9:27-30). ಕೆಲವು ಸಲ ಅದ್ಭುತಕರವಾದದ್ದು ಆತನ ಮಹಿಮೆಯನ್ನೂ ಆತನ ತಂದೆಯ ಮಹಿಮೆಯನ್ನೂ ತೋರಿಸುವ ಸಾಧನವಾಗಿ ಉಪಯೋಗಿಸಲ್ಪಟ್ಟಿತು (ಯೋಹಾನ 2:11; 11:1-14, 38-44). ಹಾಗಿದ್ದರೂ ರಾಜಕೀಯ ಅಥವಾ ತನ್ನ ದೈವಿಕ ಬಲವನ್ನೂ ಮೆಸ್ಸೀಯತ್ವವನ್ನೂ, ಕಾಲಕ್ಕಿಂತ ಮೊದಲು ಘೋಷಣೆಯಾಗುವದನ್ನು ಆತನು ತಪ್ಪಿಸಲು ಪ್ರಯತ್ನಿಸಿದನು (ಮಾರ್ಕ 8:29, 30; ಯೋಹಾನ 1:48-51).

## ಯೇಸುವು ತನ್ನ ವ್ಯಕ್ತಿತ್ವವನ್ನು ಹೇಗೆ ಪ್ರಕಟಿಸಿದನು

ಎರಡನೆಯದಾಗಿ, ತನ್ನ ಸ್ವಂತ "ವೇಳಾಪಟ್ಟಿಯನ್ನು" ಅನುಸರಿಸಿ ತನ್ನ ವ್ಯಕ್ತಿತ್ವದ ಪೂರ್ಣ ಮಹತ್ವವನ್ನೂ ಪಾತ್ರವನ್ನೂ ಪ್ರಕಟಿಸುವದನ್ನು ನಿಯಂತ್ರಿಸಲು ಆತನು ಪ್ರಯತ್ನಿಸಿದನು. ತನ್ನ ಬಗ್ಗೆ ಮೆಚ್ಚಿಕೆಯ ವಿವರಣೆಗಳಲ್ಲಿ ಒಂದು "ಮನುಷ್ಯ ಕುಮಾರನು" ಎಂಬುದಾಗಿದೆ. ಸುವಾರ್ತೆಗಳಲ್ಲಿ ಯಾರಿಂದಲೂ ಈ ಮಾತು ಆತನ ಬಗ್ಗೆ ಎಂದೂ ಉಪಯೋಗಿಸಲ್ಪಟ್ಟಿಲ್ಲ ಎಂಬುದು ಗಮನಾರ್ಹವಾದದ್ದಾಗಿದೆ, ಯೇಸುವಿನ ಈ ಮಾತು ಉಪಯೋಗಿಸಲ್ಪಟ್ಟ ಒಂದೇ ಸಮಯವು ಆತನ ಹೇಳಿಕೆಯ ಬಗ್ಗೆ ಜನರ ಗುಂಪು ಆತನಿಗೆ ಪ್ರತಿಯಾಗಿ ಹೇಳಿದಾಗ ಇರುತ್ತದೆ: "... ಹಾಗಾದರೆ ಮನುಷ್ಯ ಕುಮಾರನು ಮೇಲಕ್ಕೆ ಎತ್ತಲ್ಪಡಬೇಕೆಂದು ನೀನು ಹೇಳುವುದು ಹೇಗೆ? ಆ ಮನುಷ್ಯ ಕುಮಾರನು ಯಾರು? ಅಂದರು" (ಯೋಹಾನ 12:34ಬಿ).

"ಮನುಷ್ಯ ಕುಮಾರನು" ಎಂಬುದನ್ನು ಯೇಸು ತನಗೆ ಸಂಬಂಧಿಸಿ ಕೊಂಡದ್ದರಲ್ಲಿ ಯಾವ ಪ್ರಶ್ನೆಯಿರುವದಿಲ್ಲ. ಆತನು ತನ್ನ ಬಗ್ಗೆ ಈ ವಿವರಣೆಯನ್ನು ಸಮಾಂತರಗಳನ್ನು ಕಡೆಗಣಿಸಿ ನಾಲ್ಕು ಸುವಾರ್ತೆಗಳಲ್ಲಿ ಸುಮಾರು ಎಂಭತ್ತು ಸಲ ಉಪಯೋಗಿಸಿರುವನು. ಸಮಾಂತರತೆಗಳನ್ನು ತೆಗೆದು ಕೊಳ್ಳುವಾಗಲೂ ಒಂದು ಸಂಗತಿಯು ಸ್ಪಷ್ಟವಾಗುತ್ತದೆ: ಯೇಸುವು ಈ ಶಿರೋನಾಮೆಯಿಂದ ತನ್ನನ್ನು ಗುರುತಿಸಿಕೊಂಡದ್ದಲ್ಲದೇ ತನ್ನ ಸಂಪೂರ್ಣ ಸೇವೆಯಲ್ಲಿ ತನ್ನನ್ನು "ಮನುಷ್ಯ ಕುಮಾರ"ನಂತೆ ಇಟ್ಟುಕೊಂಡಿದ್ದನು.[3]

"ಮನುಷ್ಯ ಕುಮಾರ" ನಂತೆ ನಿಜವಾಗಿಯೂ ಯೇಸುವಿನ ಪಾತ್ರವು ಹೇಗೆ ಸುತ್ತುವರಿಯುವದು ಎಂಬುದನ್ನು ಗಮನಿಸೋಣ:

1. "ಮನುಷ್ಯ ಕುಮಾರನು" ಕಷ್ಟಗಳನ್ನು ಸಹಿಸಿದನು (ಮತ್ತಾಯ 8:20; ಲೂಕ 9:58).
2. ಆತನು ಸೇವಕನಾಗಿದ್ದನು (ಮತ್ತಾಯ 20:28; ಮಾರ್ಕ 10:45).
3. ಆತನು ಜನರೊಂದಿಗೆ ಗುರುತಿಸಿಕೊಂಡನು (ಮತ್ತಾಯ 11:19; ಲೂಕ 6:22; 7:34; ಯೋಹಾನ 9:35).
4. ತನ್ನ "ಮನುಷ್ಯ ಕುಮಾರನ" ಪಾತ್ರಕ್ಕೆ ಜನರ ಪ್ರತಿಕ್ರಿಯೆಯಲ್ಲಿ ಆತನು

ಆಸಕ್ತನಾಗಿದ್ದನು (ಮತ್ತಾಯ 16:13).

5. ಆತನು ಅಲ್ಲಗಳೆಯಲ್ಪಟ್ಟನು (ಮತ್ತಾಯ 17:22; 20:18; 26:24, 45; ಮಾರ್ಕ 9:31; 10:33; 14:21, 41; ಲೂಕ 9:44; 22:48; 24:7ಎ).
6. ಆತನು ಶ್ರಮೆಪಟ್ಟನು (ಮತ್ತಾಯ 17:12; 26:2; ಮಾರ್ಕ 8:31; 9:12; ಲೂಕ 9:22).
7. ಆತನು ಕ್ರೂಜಿಸಲ್ಪಟ್ಟನು (ಲೂಕ 24:7ಬಿ; ಯೋಹಾನ 3:14; 8:28; 12:24).
8. ಆತನು ಎದ್ದುಬಂದನು (ಮತ್ತಾಯ 12:40; 17:9; ಮಾರ್ಕ 9:9; ಲೂಕ 11:30; 24:7ಸಿ).
9. ಆತನು ಪ್ರಕಟಿಸಲ್ಪಟ್ಟನು (ಲೂಕ 17:30).
10. ಆತನು ಪುನಃ ಬರಲಿಕ್ಕಿರುವನು (ಮತ್ತಾಯ 10:23; 16:27; 24:27, 30, 37, 39, 44; 25:31; 26:64ಬಿ; ಮಾರ್ಕ 13:26; ಲೂಕ 12:40; 17:24; 18:8; 21:27; ಯೋಹಾನ 3:13).
11. ಆತನು ನ್ಯಾಯ ತೀರಿಸುವನು (ಮತ್ತಾಯ 25:31-46; ಮಾರ್ಕ 8:38; ಲೂಕ 9:26; 12:8, 9; 17:26; 21:36).
12. ಆತನಿಗೆ ರಾಜ್ಯವಿರುವುದು (ಮತ್ತಾಯ 16:28; 19:28).
13. ಆತನು ಏರಿಹೋಗುವನು (ಯೋಹಾನ 6:62).
14. ಆತನು ಆಳಿಕೆ ಮಾಡುವನು (ಮತ್ತಾಯ 26:64ಎ; ಮಾರ್ಕ 14:62; ಲೂಕ 22:69).
15. ಆತನು ಹಳೇ ಧರ್ಮಶಾಸ್ತ್ರಕ್ಕಿಂತ ಹೆಚ್ಚು ಶ್ರೇಷ್ಠನಾಗಿರುವನು (ಮತ್ತಾಯ 12:8; ಮಾರ್ಕ 2:28; ಲೂಕ 6:5).
16. ಆತನು ದೇವದೂತರಿಗಿಂತ ಶ್ರೇಷ್ಠನಾಗಿರುವನು (ಮತ್ತಾಯ 13:41).
17. ಆತನು ಮಹಿಮೆ ಪಡಿಸಲ್ಪಟ್ಟನು (ಯೋಹಾನ 1:51; 13:31).
18. ಆತನು ಪಾಪಗಳನ್ನು ಕ್ಷಮಿಸುವನು (ಮತ್ತಾಯ 12:32; ಮಾರ್ಕ 2:10; ಲೂಕ 5:24; 12:10).
19. ಆತನು ಅಧಿಕಾರವುಳ್ಳಾತನಾಗಿದ್ದಾನೆ (ಮತ್ತಾಯ 9:6; ಯೋಹಾನ 5:27).
20. ಆತನು ಪರಿಶುದ್ಧ ಬರಹಗಳನ್ನು ನೆರವೇರಿಸಿದನು (ಮತ್ತಾಯ 26:24; ಮಾರ್ಕ 14:21ಎ; ಲೂಕ 18:31).
21. ಆತನು ಜೀವ ಕೊಡುತ್ತಾನೆ (ಯೋಹಾನ 6:27, 53-56).
22. ಆತನು ರಕ್ಷಿಸುತ್ತಾನೆ (ಲೂಕ 19:10).
23. ಆತನಿಗೆ "ವೇಳಾಪಟ್ಟಿ" ಇತ್ತು (ಮಾರ್ಕ 14:41; ಯೋಹಾನ 12:23).

ಕುಮಾರನಾದ ದೇವರು ಸತತವಾಗಿ ತನ್ನನ್ನು "ಮನುಷ್ಯಕುಮಾರನು" ಎಂದು ವಿವರಿಸಿಕೊಳ್ಳುವುದು ಹೆಚ್ಚಾಗಿ ಒಂದಕ್ಕೊಂದು ವಿರೋಧವಾಗಿದ್ದುದು ವಿಪರ್ಯಾಸ ವಾಗಿತ್ತು. ಅದನ್ನು ಆತನು ಯಾಕೆ ಮಾಡಿದನು? ಈ ಮಾತನ್ನು ಉಪಯೋಗಿಸುವುದು ಆತನ ನಿಜವಾದ ಗುರುತನ್ನು ಪ್ರಕಟಿಸುವ ಹಾಗೂ ಮರೆಮಾಡುವ ಸುಂದರವಾದ ಮತ್ತು ಸ್ಪಷ್ಟವಾದ ಮಾರ್ಗವಾಗಿತ್ತು. ಆತನ ನಿಜವಾದ ಸ್ವಭಾವವನ್ನು ಹಾಗೂ ಶಕ್ತಿಯನ್ನು ಆತನ ಭೂಲೋಕದ ಸೇವೆಯಲ್ಲಿ ಬಹಿರಂಗ ಪಡಿಸುವದನ್ನು ನಿಯಂತ್ರಿಸಲು ಆತನಿಗೆ ಅವಕಾಶ ಕೊಟ್ಟಿತು. ಆತನ "ವೇಳಾಪಟ್ಟಿಯು" ಆತನಿಗೆ ಮಹತ್ವವುಳ್ಳದ್ದಾಗಿತ್ತು.

ರಬ್ಬಿಯಂತೆ ಗುರುವಿನಂತೆ ಹಾಗೂ ಬೋಧಕನಂತೆ ಆತನು ಯಾವಾಗಲೂ ಈ "ವೇಳಾಪಟ್ಟಿಯ" ಬಗ್ಗೆ ಅರಿತವನಾಗಿದ್ದನು. ಉದಾಹರಣೆಯಾಗಿ ಆತನ ಬಹಳ ಪ್ರಸಿದ್ಧವಾದ ಬೋಧನಾ ವಿಧಾನವು ಸಾಮ್ಯಗಳನ್ನು ಉಪಯೋಗಿಸುವುದು ಆಗಿತ್ತು. ಆತನು ಬೋಧಿಸಿದ ಸತ್ಯವನ್ನು ಪ್ರಕಟಿಸಲು ಹಾಗೂ ಮರೆಯಾಗಿಡಲು ಈ ವಿಧಾನವು ಯೋಗ್ಯವಾದದ್ದು ಆಗಿತ್ತು.[4] ಯೋಗ್ಯವಾದ ಸಮಯದಲ್ಲಿ ಸರಳ ಮಾತುಗಳಲ್ಲಿ ತಾನು ಸಂಪರ್ಕಿಸುವೆನೆಂದು ತನ್ನ ವಾಗ್ದಾನದೊಂದಿಗೆ ಆತನು ಇದೇ ಕಾರಣಕ್ಕಾಗಿ ಇತರ ರೀತಿಯ ಸಾಂಕೇತಿಕ ಭಾಷೆಯನ್ನು ಉಪಯೋಗಿಸಿದನು.[5]

ಆತನ ನರಾವತಾರವೂ ಸಹ ಒಂದು ರೀತಿಯಲ್ಲಿ ರಹಸ್ಯವಾಗಿರುವ ಸತ್ಯವಾಗಿತ್ತು, ನೀವು ಬಯಸಿದರೆ ಸಜೀವ ಸಾಮ್ಯವಾಗಿತ್ತೆಂದು ಹೇಳಬಹುದು. ಎಲ್ಲಕ್ಕಿಂತಲೂ ಹೆಚ್ಚಾಗಿ ದೇವರ ಮುಖವನ್ನು ನೇರವಾಗಿ ನೋಡಿ ಜೀವದಿಂದ ಯಾರು ಉಳಿಯ ಬಲ್ಲರು?[6] ಯೇಸುವು ಶರೀರದಲ್ಲಿ ಇದ್ದನು. ಆತನ ದೇಹದ ತೆರೆಯಿಂದ ಮಾನವ ಜೀವಿಯು ಆತನ ಕಡೆಗೆ ನೋಡಿ, "ನನ್ನ ಕರ್ತನೇ, ನನ್ನ ದೇವರೇ" ಎಂದು ಹೇಳಲು ಶಕ್ತನಾದನು (ಯೋಹಾನ 20:28). ಶರೀರದ ಮುಸುಕು ಪರದೆಯಲ್ಲಿ ದೇವತ್ವವು ನಮ್ಮ ಬಳಿಗೆ ಬಂದಾಗ, ಪರದೆಯು ದೇವರ ಮಹಾ ಪ್ರೀತಿಯ; ದಯೆಯ ಮಹಿಮೆ ಯುಳ್ಳ ಪ್ರಕಟಣೆಯಾಯಿತು. ಯೇಸುವಿನ ದೇಹ ಈಟಿಯಿಂದ ತಿವಿಯಲ್ಪಟ್ಟಾಗ[7] ಹಾಗೂ ಕಲ್ವಾರಿಯ ಮೇಲೆ ಆತನ ರಕ್ತವು ಸುರಿಸಲ್ಪಟ್ಟಾಗ ಆತನ ಕೃಪೆಯು ಪ್ರಕಟ ವಾಯಿತು.[8]

"ಕುಮಾರನಾದ ದೇವರು" ತನ್ನ ಸಂಪೂರ್ಣ ವ್ಯಕ್ತಿತ್ವವನ್ನೂ ಪಾತ್ರವನ್ನೂ ಜನರ ಗ್ರಹಿಕೆಯ ಬೆಳವಣಿಗೆಯನ್ನು ಜಾಗರೂಕತೆಯಿಂದ ನಿಯಂತ್ರಣ ಮಾಡಿದನು.

---

ಟಿಪ್ಪಣಿಗಳು

[1]ಯೋಹಾನ 2:11, 23, 24; 6:14, 15, 60-71; ಮತ್ತಾಯ 12:38, 39; ಇತ್ಯಾದಿ. [2]ಮತ್ತಾಯ 20:34; ಮಾರ್ಕ 5:19; ಲೂಕ 7:11-15. [3]ಸಂಕ್ಷಿಪ್ತ ಚರ್ಚೆಯನ್ನು ಇದರಲ್ಲಿ ನೋಡಿರಿ: C. S. Mann, *Mark,* The Anchor Bible, vol. 27 (Garden City, N. Y.: Doubleday, 1986), 106-14. [4]ಮತ್ತಾಯ 13:10-13, 34, 35; ಮಾರ್ಕ 4:10-12, 33, 34; ಲೂಕ 8:10. [5]ಯೋಹಾನ 10:6; 16:25, 29, 30. *Paroimia* = ಉಪಮೆ, ಸಂಕೇತ, ಜ್ಞಾನೋಕ್ತಿ, ಸಾಮ್ಯ. ವಿವಿಧ ಭಾಷಾಂತರಗಳನ್ನು ನೋಡಿರಿ. [6]ವಿಮೋಚನಕಾಂಡ 33:20; ಯೋಹಾನ 1:18; 6:46; 1 ತಿಮೊಥೆ 6:15, 16; 1 ಯೋಹಾನ 4:12ಎ. [7]ಯೇಸುವಿನ "ಶರೀರ ಪರದೆಯು" ತಿವಿಯಲ್ಪಟ್ಟಾಗ, ದೇವಲಾಯದ ಪರದೆಯು ಸಾಂಕೇತಿಕವಾಗಿ ಎರಡು ಭಾಗವಾಗಿ ಹರಿಯಿತು (ಮತ್ತಾಯ 27:51; ಮಾರ್ಕ15:38; ಲೂಕ 23:45). [8]"... ನಮ್ಮ ಗ್ರಂಥ ಕರ್ತನು ಪರದೆಯನ್ನು ನಮ್ಮ ಕರ್ತನ ಮಾನವ ಜೀವನದ ಸಂಕೇತದಂತೆ ನೋಡಿದನು" (F. F. Bruce, *The Epistle to the Hebrews* [Grand Rapids, Mich.: Wm. B. Eerdmans Publishing Co., 1944], 249).

# "ಮನುಷ್ಯ ಕುಮಾರನು"

"ಮನುಷ್ಯ ಕುಮಾರನು" ಎಂಬ ಪದವನ್ನು ಮಾನವತೆಯೊಂದಿಗೆ ಯೇಸುವಿನ ಗುರುತಿಸಿಕೊಳ್ಳುವಿಕೆಯೆಂದು ಬಹಶಃ ನಾವು ಯೋಚಿಸುತ್ತೇವೆ. ಹಾಗಿದ್ದರೂ, ಯೇಸುವಿನ ಸಮಯದಲ್ಲಿ ನಾವು ಜೀವಿಸಿದ್ದರೆ, ಈ ಮಾತಿಗೆ ವಿರುದ್ಧವಾದ ಪರಿಣಾಮವಿರುತ್ತದೆ. ಈ ಮಾತು ಯೇಸುವನ್ನು "ಪರಲೋಕದ ವ್ಯಕ್ತಿಯಂತೆ" ಗುರುತಿಸುತ್ತಿತ್ತು. ಯಾಕೆ? ಯಾಕಂದರೆ ಯೇಸುವು ಭವಿಷದ್ದರ್ಶನದ ಸಮಯದಲ್ಲಿ (apocalyptic time) ಜೀವಿಸಿದನು. ಪೂರ್ಣಮಟ್ಟದಲ್ಲಿ ಭವಿಷದ್ದರ್ಶನಿಕತ್ವವನ್ನು[1] ನಮಗೆ ಸಂಶೋಧಿಸಲಿಕ್ಕೆ ಆಗದಿದ್ದರೂ ಕೆಲವು ವಿವರಗಳಿದ್ದ ವ್ಯಾಖ್ಯಾನಗಳು ಯೇಸು ತನ್ನನ್ನು "ಮನುಷ್ಯ ಕುಮಾರನು" ಎಂಬುದಾಗಿ ಮೆಚ್ಚಿಕೆಯಿಂದ ವಿವರಿಸಿಕೊಂಡದ್ದನ್ನು ಪೂರ್ಣವಾಗಿ ಗ್ರಹಿಸಿಕೊಳ್ಳಲು ಸಹಾಯವಾಗುವುದು.

ಕ್ರಿ.ಪೂ. 200ರ ಜಗತ್ತು ಸುಮಾರು ಕ್ರಿ.ಶ. 100ರ ವರೆಗೆ ಯೆಹೂದ್ಯರಿಗಾಗಿ "ಎಡವಿಬಿದ್ದ ಜಗತ್ತು" ಆಗಿತ್ತು. ಈ ಶತಮಾನದ ಹಿಂದಿನ ಸಮಯದಲ್ಲಿ ಯೆಹೂದಿ ಜನಾಂಗ ದುರ್ಘಟನೆ ನಂತರ ದುರ್ಘಟನೆಗಳನ್ನು ಅನುಭವಿಸಿತ್ತು. ಕ್ರಿ.ಪೂ. 721ರಲ್ಲಿ ಇಸ್ರಾಯೇಲ ರಾಜ್ಯವು ಅಸ್ಸೀರಿಯದ ವಶವಾಯಿತು. ಕ್ರಿ.ಪೂ. 606ರಿಂದ ಕ್ರಿ.ಪೂ. 586ರ ವರೆಗೆ ಯೆಹೂದ ರಾಜ್ಯವು ಜಯಿಸಲ್ಪಟ್ಟಿತು. ಜನರು ಬಬಿಲೋನಿಗೆ ಸೆರೆಯಾಗಿ ಒಯ್ಯಲಟ್ಟರು. ಅವರ ದೇವಾಲಯ ಮತ್ತು ಪ್ರೀತಿಯ ಪಟ್ಟಣವಾದ ಯೆರೂಸಲೇಮು ನಾಶಪಡಿಸಲ್ಪಟ್ಟವು. ಕ್ರಿ.ಪೂ. 539ರಲ್ಲಿ ಪರ್ಷಿಯನ್ನರು ಬಬಿಲೋನಿಯರನ್ನು ಜಯಿಸಿದರು. ಸ್ವಲ್ಪ ಸಮಯದ ನಂತರ ಯೆಹೂದ್ಯರು ತಮ್ಮ ತಾಯ್ನಾಡಿಗೆ ಹಿಂದಿರುಗಲು ಅಪ್ಪಣೆ ಕೊಡಲ್ಪಟ್ಟರು. ಅಲ್ಲಿ ಅವರು ಕ್ರಮೇಣವಾಗಿ ಗ್ರೀಕರ, ಸಿರಿಯನ್ನರ, ಐಗುಪ್ತರ ಹಾಗೂ ರೋಮನ್ನರ ದಬ್ಬಾಳಿಕೆಯ ಬಲವಾದ ಪೆಟ್ಟುಗಳನ್ನು ಸಹಿಸಿದರು. ಅವರು ದೇವಾಲಯವನ್ನು ಪುನಃ ಕಟ್ಟಿದರೂ (ಕ್ರಿ.ಪೂ. 515) ಹಾಗೂ ಕೆಲಕಾಲ ಸಿರಿಯನ್ ಆಳಿಕೆಯಿಂದ ತಮ್ಮ ಸ್ವಾತಂತ್ರ್ಯ ಪಡೆದು ಕೊಂಡಿದ್ದರೂ (ಸುಮಾರು ಕ್ರಿ.ಪೂ. 165-63), ಸುಮಾರು ಕ್ರಿ.ಪೂ. 63ರಿಂದ ಶತಮಾನಗಳವರೆಗೆ ನೇರವಾಗಿ ರೋಮನ್ ಆಳಿಕೆಗೆ ಒಳಪಟ್ಟಿದ್ದರು. ಕ್ರಿ.ಶ. 70ರಲ್ಲಿ ರೋಮನ್‌ರು ಎರಡನೆಯ ದೇವಾಲಯವನ್ನು ನಾಶಪಡಿಸಿದರು.

ಕ್ರಮದ ಈ ದೀರ್ಘಕಾಲದ ಐತಿಹಾಸಿಕ ಬೀಳುವಿಕೆಯು ಯೆಹೂದಿ ಸಂತತಿಯ ವರಿಗೆ ಕುತೂಹಲವನ್ನೂ ನಿರಾಶೆಯನ್ನೂ ತಂದಿತ್ತು. ಅವರ ರಾಷ್ಟ್ರೀಯ ನಿರೀಕ್ಷೆಗಳು ಹಾಳಾಗಿ ಹೋದವು. ತಮ್ಮ ಪ್ರವಾದಿಕ ಪರಿಶುದ್ಧ ಬರಹಗಳಲ್ಲಿ ಕಂಡುಬಂದ ವಾಗ್ದಾನಗಳಲ್ಲಿ ಕೆಲವನ್ನು ಅವರು ಪುನಃ ವ್ಯಾಖ್ಯಾನಿಸುವ ಅವಶ್ಯಕತೆಯನ್ನು ಕಂಡುಕೊಂಡರು. ಅನೇಕರಿಗೆ ಅದು ಪುನಃ ವ್ಯಾಖ್ಯಾನಿಸುವಿಕೆ ಇಲ್ಲವೇ ನಿರೀಕ್ಷೆ ಕಳೆದು ಹೋಗುವಿಕೆಯು ಆಗಿತ್ತು. ಅವರ ವಾಗ್ದತ್ತ ರಾಜ್ಯವು ಎಲ್ಲಿತ್ತು? ಅವರ ವಾಗ್ದತ್ತ ಮೆಸ್ಸೀಯನು ಎಲ್ಲಿದ್ದನು? ದೇವರಿಂದ ನೇಮಕವಾದಾತನಿಂದ ವಿಜೃಂಭಿಸುವ ಪುನಃ ಸ್ಥಾಪನೆ ಹಾಗೂ ದೇವರಿಂದ ನೇಮಿಸಲ್ಪಟ್ಟ ಮೆಸ್ಸೀಯನ ಆಡಳಿತದ ವಾಗ್ದಾನಗಳ ಬಗ್ಗೆ ಏನು?[2]

ಈ ಮಹಾವ್ಯಥೆಯ ದೊಡ್ಡ ಪಾತ್ರೆಯೊಳಗಿನ ಅಪೊಕಾಲಿಪ್ಟಿಕ್ ಬರಹಗಳ ಸಾಹಿತ್ಯ ಸಂಗ್ರಹವು ದೇವರ ನಿರಾಶೆಯುಳ್ಳ ಜನರಿಗೆ ನಿರೀಕ್ಷೆ ತರಲು ಹುಟ್ಟಿಬಂದಿತು. ಈ ನಿರೀಕ್ಷೆಯ ಸಂದೇಶವು ಸಾಮಾನ್ಯವಾಗಿ ವಿವರವಾದ, ಸಂಕೇತಗಳುಳ್ಳ, ರೂಪಕಾರ್ಥಕವಾದ ಭಾಷೆಯಲ್ಲಿ ಮುಂದಿಡಲ್ಪಟ್ಟಿತು. ಹೆಚ್ಚಿನ ಈ ಬರಹಕ್ಕೆ ತಳಹದಿಯು ಮಾನವ

ಕುಲದ ದುಷ್ಟತ್ವದ ಕಾರಣದಿಂದ ದೇವರು ಚರಿತ್ರೆಯ ಮೇಲೆ "ಬಿಟ್ಟುಕೊಟ್ಟಿದ್ದಾನೆ" ಎಂಬ ದೃಢನಂಬಿಕೆಯಾಗಿತ್ತು. ಆದರೆ ದೇವರು ಇನ್ನೂ ನಿಯಂತ್ರಣದಲ್ಲಿದ್ದಾನೆ. ದೇವರು ಲೋಕವನ್ನು ಜಯಿಸುವನು; ನೀತಿವಂತರು ಸ್ಥಾಪಿಸಲ್ಪಡುವರು ಮತ್ತು ದೇವರ ಆಳಿಕೆಯು (ರಾಜ್ಯವು) ಸಮಯದಲ್ಲಾಗಲೀ ಇಲ್ಲವೇ ನಂತರದ ಐತಿಹಾಸಿಕ ಸಾಮ್ರಾಜ್ಯದಲ್ಲಿ ಸಮೃದ್ಧಿ ಹೊಂದುವುದು. ಪರಿಶುದ್ಧ ಬರಹದ ವಾಗ್ದಾನಗಳು ಸತ್ಯವಾಗಲು - ಆದರೆ "ನೂತನ" ಮಾರ್ಗದಲ್ಲಿ - ನಿರೀಕ್ಷಿಸಿಲ್ಪಟ್ಟಿದ್ದವು.[3]

ಈ ಹಿನ್ನೆಲೆಯಲ್ಲಿ, "ಮನುಷ್ಯಕುಮಾರನು" ಎಂಬ ಮಾತು ಅತೀ ಮಹತ್ವವುಳ್ಳದ್ದಾಗಿದೆ. ಅದು "ಪರಲೋಕದ ಮೂಲದ" ಒಬ್ಬಾತನನ್ನು ಸೂಚಿಸಿತು. ದಾನಿಯೇಲನ ಗ್ರಂಥ 7ರಿಂದ 12ರವರೆಗೆ ಅಧ್ಯಾಯಗಳಲ್ಲಿ ಅಪೊಕಾಲಿಪ್ಟಿಕ್ ಭಾಗವು "ಪುರಾತನ ದಿನಗಳಲ್ಲಿ" ಇದ್ದ ಜೀವಿಯಂತೆ "ಮನುಷ್ಯಕುಮಾರನನ್ನು" ತೋರಿಸುತ್ತದೆ. ಆತನಿಗೆ "ನಾಶಪಡಿಸಲ್ಪಡಲಾರದ" (7:14) ರಾಜ್ಯವು ಕೊಡಲ್ಪಟ್ಟಿತು. ಭೂಲೋಕದ ರಾಜ್ಯಗಳಿಗೆ ವಿರುದ್ಧವಾಗಿ, "ಮಹೋನ್ನತನ ಪರಿಶುದ್ಧರು ರಾಜ್ಯವನ್ನು ಪಡೆದು ಕೊಳ್ಳುವರು ಹಾಗೂ ಅವರು ಅದನ್ನು ಶಾಶ್ವತವಾಗಿ ಹೊಂದಿ ಕೊಳ್ಳುವರು, ಹೌದು, ಅದು ಎಂದೆಂದಿಗೂ ಅಳಿದು ಹೋಗುವದಿಲ್ಲ" ಎಂದು ದಾನಿಯೇಲನು ಹೇಳಿದನು.[4] ಯೆಹೂದ್ಯರ ಅಪೊಕಾಲಿಪ್ಟಿಕ್ ನಿರೀಕ್ಷೆಯು "ಪುರಾತನ ದಿನಗಳಲ್ಲಿ" (ದೇವರು) ನೆಲೆಗೊಂಡಿತ್ತು. ದೇವರು "ಮನುಷ್ಯ ಕುಮಾರನ" ಬರೋಣದ ಮುಖಾಂತರ ಅವರ ಪರವಾಗಿ ಮಾನವ ಚರಿತ್ರೆಯಲ್ಲಿ ಆತನು ಮಧ್ಯೆ ಪ್ರವೇಶಿಸುವನು. ಆತನು ಅವರನ್ನು ಸ್ಥಾಪಿಸಿಕೊಳ್ಳುವನು; ಆತನು ಆಳಿಕೆ ಮಾಡುವನು ಹಾಗೂ ಅವರು ರಾಜ್ಯವನ್ನು ಸ್ವಾಸ್ಥ್ಯವಾಗಿ ಪಡೆದು ಕೊಳ್ಳುವರು.

ಪ್ರಶ್ನೆಯಿಲ್ಲದೆ ಆದಿ ಕ್ರೈಸ್ತರು ಕೊನೆಗೆ ನಜರೇತಿನ ಯೇಸುವನ್ನು ಹಳೇ ಒಡಂಬಡಿಕೆಯಲ್ಲಿ ವಿವರಿಸಿದ ವಾಗ್ದಾತ್ತ "ಮನುಷ್ಯ ಕುಮಾರ" ನಂತೆ ನೋಡಿದರು. ಅಂದರೆ ಆತನನ್ನು ಪಾರಲೌಕಿಕ ಜೀವಿಯೆಂದು ಅವರು ಒಪ್ಪಿಕೊಂಡರು; ಆತನು ದೇವರಾಗಿದ್ದನು. ಸೊಲೊಮೋನ (2 ಸಮುವೇಲ 7:14) ಇಲ್ಲವೇ ಇಸ್ರಾಯೇಲನಂತೆ (ವಿಮೋಚನಕಾಂಡ 4:22, 23) ಆತನು ದೇವರ ಒಬ್ಬ ಮಗನಾಗಿರಲಿಲ್ಲ. ಆತನು "ಮನುಷ್ಯ ಕುಮಾರನಾಗಿ" ಕೀರ್ತನೆ 8:4-6ರ (ನೋಡಿರಿ ಇಬ್ರಿಯ 2:5-11; 1 ಕೊರಿಂಥ 15:27; ಎಫೆಸ 1:22) ಹಾಗೂ ಯೆಶಾಯ 7:14ರ (ನೋಡಿರಿ ಮತ್ತಾಯ 1:22, 23) ನೆರವೇರುವಿಕೆಯಾಗಿದ್ದನು. ನಿಜವಾಗಿಯೂ ಆತನು ಅಪೊಕಾಲಿಪ್ಟಿಕ್ ಜಯಶಾಲಿ, ದೈವಿಕವಾದಾತನು ಆಗಿದ್ದನು. "ಮೊದಲನೆಯವನೂ ಕಡೆಯವನೂ ... ಜೀವಿಸುವಾತನೂ ಆಗಿರುತ್ತಾನೆ" (ಪ್ರಕಟನೆ 1:12-18). ತನ್ನ ಎಲ್ಲಾ ಅದ್ಭುತಕರವಾದ ಮಹಿಮೆಯಲ್ಲಿ ಕಂಡು ಬಂದನು.

ಹಾಗಾದರೆ, ಯೇಸುವು "ಮನುಷ್ಯ ಕುಮಾರನು" ಎಂಬುದನ್ನು ಸತತವಾಗಿ ಅನ್ವಯಿಸಿಕೊಳ್ಳುವದನ್ನು ಕೇಳಿದ ಜನರು, ತಾವು ಬಹಳ ಸಮಯದ ನಿರೀಕ್ಷೆಗಳ ಮತ್ತು ಕನಸುಗಳ ನೆರವೇರುವಿಕೆಯಂತೆ ಆತನನ್ನು ಯಾಕೆ ಸ್ವೀಕರಿಸಲಿಲ್ಲ? ಆತನ ನರಾವತಾರದ ಕಾರಣದಿಂದ. ಯೆಹೂದಿ ಅಪೊಕಾಲಿಪ್ಟಿಸ್ಟರು ತಮ್ಮ ಆಲೋಚನೆಗಳನ್ನು ಹಾಗೂ ಅವರ ಹಿಬ್ರೂ ಪರಿಶುದ್ಧ ಬರಹಗಳನ್ನು ವ್ಯಾಖ್ಯಾನಿಸುವದನ್ನು ಪುನಃ ಪರಿಶೀಲಿಸಿಕೊಂಡಿದ್ದರು. ಅವರು ಪುನಃ ವ್ಯಾಖ್ಯಾನಿಸಿಕೊಂಡದ್ದಕ್ಕನುಗುಣವಾಗಿ, ಅವರ ವಿಪತ್ತುಗಳ ಪರಿಹಾರವು ಸಮೀಪ ಇಲ್ಲವೇ ಅಂತ್ಯ ಸಮಯದಲ್ಲಿ ದೇವರ ವೈಯಕ್ತಿಕ ಪ್ರವೇಶಿಸುವಿಕೆಗಿಂತ ಕಡಿಮೆಯಾದದ್ದು ಇರಲಿಲ್ಲ. ಹಳೇ ಕ್ರಮವು ಬಿದ್ದು ಹೋಗುವುದು. ದೇವರ ಅಪೊಕಾಲಿಪ್ಟಿಕ್ ಆಳಿಕೆಯು ಅವರ ಮಹಿಮೆಯ ಒಂದಾಗುವಿಕೆಗೆ

ಭರವಸೆಕೊಟ್ಟಿತು. “ಮನುಷ್ಯ ಕುಮಾರನು” ಈ ಮಹಿಮೆಗೆ ಸಾಧನವಾಗುವನು.

ಕೇವಲ ಮಾನವ ಜೀವಿಯು ಅಂಥ ನಿರೀಕ್ಷೆಯನ್ನು ಪೂರೈಸಲಾರನು. ಯಾವುದೇ ಮರ್ತ್ಯನೂ ಸಹ ಒಂದು ಯುಗವನ್ನು ಪೂರ್ತಿಗೊಳಿಸಿ ಚರಿತ್ರೆಯನ್ನೂ ವಾಸ್ತವಿಕತೆಯನ್ನೂ ಬದಲಾಯಿಸಿ ಇನ್ನೊಂದು ಯುಗವನ್ನು ತರಲಾರನು. ಶರೀರದಲ್ಲಿ ಇದ್ದ ಯೇಸುವು ಅವರ ಅಪೊಕಾಲಿಪ್ಟಿಕ್ ದರ್ಶನಕ್ಕೆ ಹೊಂದಿಕೊಳ್ಳಲಿಲ್ಲ. “ಮನುಷ್ಯ ಕುಮಾರನು” ಎಂದು ತನ್ನಷ್ಟಕ್ಕೆ ಬಹಳ ಸಲ ಆತನು ಮಾತಾಡಿದರೂ ಆತನ ಮಾನವತೆಯು ಆತನ ದೈವತ್ವವನ್ನು ಮುಚ್ಚಿಟ್ಟಿತು. ಆತನು ಪುನಃ ಪುನಃ ದೇವರ ರಾಜ್ಯವು ಸಮೀಪವಾಗಿದೆ ಎಂದು ಒತ್ತಿ ಹೇಳಿದನು ಆದರೆ ಅವರ ಅಪೊಕಾಲಿಪ್ಟಿಕ್ ಮಹಿಮೆಯನ್ನೂ ವೈಭವವನ್ನೂ ಸೂಚಿಸುವ ಯಾವುದನ್ನೂ ಜನರು ನೋಡಲಿಲ್ಲ. ವಿಮೋಚನೆ ಮತ್ತು ಮಹಿಮೆಗೆ ಪುನಃ ಸ್ಥಾಪಿಸುವ ಅವರ ದರ್ಶನವು “ಶರೀರದಲ್ಲಿಯ ದೇವರನ್ನು” ಒಳಗೊಂಡಿದ್ದಿಲ್ಲ.

ಯೇಸುವಿನ ಸೇವೆಯು ನಮೂದಿಸಲ್ಪಟ್ಟ “ವೇಳಾಪಟ್ಟಿ” ಯಂತೆ ಆತನ ಗುರುತನ್ನೂ ಸೇವೆಯನ್ನೂ ಬಹಿರಂಗ ಪಡಿಸಿತು. ಯೇಸುವಿನ ಅದ್ಭುತಗಳು ಕೇವಲ ಇನ್ನೊಬ್ಬ ಅದ್ಭುತ ಕಾರ್ಯಗಳನ್ನು ಮಾಡುವಾತನು ಎಂದು ಕಾಣಲ್ಪಡುವದನ್ನು ತಪ್ಪಿಸಿದವು. “ಸುಳ್ಳು ಕ್ರಿಸ್ತನಲ್ಲಿ” ಒಬ್ಬನಂತೆ ಹಣೆಪಟ್ಟಿ ಹೊಂದುವುದನ್ನು ತಪ್ಪಿಸಿ ಕೊಳ್ಳಲಿಕ್ಕೆ ಮೆಸ್ಸಿಯನಂತೆ ತನ್ನ ಗುರುತನ್ನು ಪ್ರಕಟಿಸಿಕೊಳ್ಳುವದರ ಬಗ್ಗೆ ಜಾಗರೂಕನಾಗಿದ್ದನು (ಮಾರ್ಕ 13:21-23). ಅಪೊಕಲಿಪ್ಟಿಸ್ಟರು ಆತನನ್ನು ತಮ್ಮ “ಮನುಷ್ಯ ಕುಮಾರನ” ಪಾತ್ರವನ್ನು ನೆರವೇರಿಸುವನೆಂದು ಎಂದೂ ನೋಡುವುದಿಲ್ಲವೆಂದು ತಿಳಿದುಕೊಂಡು, ಆತನು “ಮನುಷ್ಯ ಕುಮಾರನು” ಎಂಬ ಮಾತನ್ನು ಉಪಯೋಗಿಸಿದನು. ತನ್ನ ಸೇವೆಯಲ್ಲಿ ಈ “ನೇರವಲ್ಲದ” ಮಾರ್ಗವನ್ನು ಆತನು ಯಾಕೆ ಉಪಯೋಗಿಸಿದನು? ಪತನದ ಸಮಯದಿಂದ ಮಾನವತೆಯನ್ನು ದೇವರು ನೇರವಾಗಿ ಎದುರಿಸಲಿಲ್ಲ.

> [ದೇವರು] ಭಾಗ್ಯವಂತನಾದ ಏಕಾಧಿಪತಿಯು ರಾಜಾಧಿ ರಾಜನೂ ಕರ್ತರ ಕರ್ತನೂ ತಾನೊಬ್ಬನೇ ಅಮರತ್ವವುಳ್ಳವನೂ ಸಮೀಪಿಸಲಾರದ ತೇಜಸ್ಸಿನಲ್ಲಿ ವಾಸ ಮಾಡುವವನೂ ಆಗಿದ್ದಾನೆ; ಮನುಷ್ಯರಲ್ಲಿ ಯಾರೂ ಆತನನ್ನು ಕಾಣಲಿಲ್ಲ, ಯಾರೂ ಕಾಣಲಾರರು … (1 ತಿಮೊಥೆ 6:15ಬಿ, 16).

ದೇವರು ತನ್ನ “ಸಮೀಪಿಸಲಾರದ ತೇಜಸ್ಸು”ನಲ್ಲಿ ಮಾನವತೆಯನ್ನು ಅದರ ಪಾಪಭರಿತ ಸ್ಥಿತಿಯಲ್ಲಿ ನೇರವಾಗಿ ಎದುರಿಸಿದರೆ ಪರಿಣಾಮವು ನಾಶಕರವಾದದ್ದಾಗುತ್ತದೆ. ಆದುದರಿಂದ, ಯೇಸುವು, ದೇವರಂತೆ, ನರಾವತಾರವಾಗಿ ದೇಹಧರಿಸಿ ಬಂದನು. ಈ ರೀತಿಯಲ್ಲಿ, ಆತನು ತನ್ನ ಪ್ರಜ್ವಲಿಸುವ ಪ್ರಕಾಶ ಮತ್ತು ಬಲದಿಂದ ಅವರನ್ನು ದಹಿಸದೇ, “ತಪ್ಪಿ ಹೋದವರನ್ನು ಹುಡುಕಿ ರಕ್ಷಿಸುವಾತನಾದನು.” ದೇವರು “ಸಮೀಪಿಸಲಾರದ ತೇಜಸ್ಸು”ನಲ್ಲಿ ವಾಸಿಸುತ್ತಾನಂದರೆ, ಅದು ತನ್ನ ಮುಸುಕಿಲ್ಲದ, ಶುದ್ಧ ಪವಿತ್ರತೆಯಲ್ಲಿ ನಮ್ಮ ಪಾಪಭರಿತ ಪರಿಸ್ಥಿತಿಯಲ್ಲಿ ಬರಲಿಕ್ಕಾಗುವದಿಲ್ಲವಲ್ಲವೇ? ಹಾಗಿದ್ದರೂ ಆತನು ನಮ್ಮ ಮಧ್ಯದಲ್ಲಿದ್ದಾನೆ. “ದೇವರು ಮನುಷ್ಯರ ಅಪರಾಧಗಳನ್ನು ಅವರ ಲೆಕ್ಕಕ್ಕೆ ಹಾಕದೆ ಲೋಕವನ್ನು ಕ್ರಿಸ್ತನಲ್ಲಿ ತನಗೆ ಸಮಾಧಾನ ಪಡಿಸಿಕೊಳ್ಳುತ್ತಿದ್ದನು …” (2 ಕೊರಿಂಥ 5:19).

ಈ ಆಶ್ಚರ್ಯಕರವಾದ ಸತ್ಯವನ್ನು ಬೆಳಕಿಗೆ ತರುವಂತೆ ಯೇಸು ತನ್ನ ವಿವೇಕವನ್ನು ಉಪಯೋಗಿಸಿದನು. ಆತನು ತನ್ನ ಮೆಸ್ಸೀಯತ್ವವನ್ನು ಒತ್ತಿ ಹೇಳಲಿಲ್ಲ. ಆದರೆ ಆತನು ದೇವರ ಮೆಸ್ಸೀಯನಾಗಿದ್ದುದನ್ನು ಒಪ್ಪಿಕೊಂಡನು (ಯೋಹಾನ 4:25, 26).

ಅದ್ಭುತಕರವಾದ ಸಂಕೇತಗಳನ್ನು ನಿರೀಕ್ಷಿಸಿದ ಅನ್ವೇಷಕರಿಗೆ ಚಕಿತಕೊಳಿಸಲು ಆತನು ಒಪ್ಪಿಸಿಕೊಡಲಿಲ್ಲ. ಆದರೆ ತನ್ನ ಮೆಸ್ಸೀಯತನವನ್ನು ಸ್ಥಾಪಿಸಲಿಕ್ಕೆ ಕರುಣೆಯ ಅದ್ಭುತ ಕಾರ್ಯಗಳನ್ನು ನಡಿಸಿದನು (ಲೂಕ 7:11-17; ಯೋಹಾನ 20:30-31). ತನ್ನ ಸಮಕಾಲಿನ ಅಪೊಕಾಲಿಪ್ಟಿಕ್ ನಿರೀಕ್ಷೆಗಳಿಗೆ ಆತನು ಹೊಂದಿಕೊಳ್ಳಲಿಲ್ಲ. ಆದರೆ ಆತನು "ಮನುಷ್ಯ ಕುಮಾರನು" ಆಗಿದ್ದಾನೆಂದು ಬೋಧಿಸಿದನು (ಅಧ್ಯಾಯ 5ರಲ್ಲಿಯ ಯಾದಿ ನೋಡಿರಿ). ಅಪೊಕಾಲಿಪ್ಟಿಕ್‌ರಂತೆ ದೇವರ ರಾಜ್ಯವು ಲೋಕಾಂತ್ಯದ ಸಂಗತಿಯಾಗಿರುವದೆಂದು ಆತನು ಬೋಧಿಸಲಿಲ್ಲ. ರಾಜ್ಯವು ಸಮೀಪವಾಗಿದೆ ಮತ್ತು ತನ್ನ ಸಂತತಿಯ ಸಮಯದಲ್ಲಿಯೇ ಅದರ ಬರೋಣವನ್ನು ಆತನು ಬೋಧಿಸಿದನು (ಮಾರ್ಕ 1:14, 15; 9:1). ಹೀಗೆ "ಅಪೊಕಾಲಿಪ್ಟಿಕ್ ಬೆಳಕಿನಲ್ಲಿ ಯಾವುದೇ ರೀತಿಯಿಂದ ಯೇಸುವನ್ನು ವ್ಯಾಖ್ಯಾನಿಸಲಾರೆವು. ಆದರೆ … ಯೇಸುವಿನ ಬೆಳಕಿನಲ್ಲಿ ಅಪೊಕಾಲಿಪ್ಟಿಕ್‌ನ್ನು ವ್ಯಾಖ್ಯಾನಿಸುವೆವು"[5] ಎಂದು ಚೆನ್ನಾಗಿ ಹೇಳಲ್ಪಟ್ಟಿದೆ.

---

ಟಿಪ್ಪಣಿಗಳು

[1]Cf. James E. Priest, "Contemporary Apocalyptic Scholarship and the Revelation" in *Johannine Studies: Essays in Honor of Frank Pack*, ed. James E. Priest (Malibu, Calif.: Pepperdine University Press, 1989), 182-204. [2]Cf. John J. Collins, *The Scepter and the Star: The Messiahs of the Dead Sea Scrolls and Other Ancient Literature*, The Anchor Bible Reference Library, gen.ed. David Noel Freedman (New York: Doubleday, 1995), 204-9. ಈ ಕೃತಿಯು ಯೇಸುವಿನ ಜನನಕ್ಕಿಂತ ಮೊದಲಿನ ಹಾಗೂ ಅನಂತರದ, ಈ ವಿಷಯದ ಬಗ್ಗೆ ಸಾಹಿತ್ಯದಲ್ಲಿ ಯೆಹೂದ್ಯರ ಮಧ್ಯದಲ್ಲಿ ಕಂಡು ಬಂದ ಅನೇಕ ಹಾಗೂ ವಿವಿಧ ಮೆಸ್ಸೀಯನ ಬಗ್ಗೆ ದೃಷ್ಟಿಕೋನಗಳನ್ನು ಜಾಗರೂಕತೆಯಿಂದ ವಿಶ್ಲೇಷಿಸುತ್ತದೆ. "ಯೇಸು ಹಾಗೂ ಡೇವಿಡಿಕ್ ಮೆಸ್ಸಾಯ" ಎಂಬುದು ವಿಶೇಷ ಆಸಕ್ತಿಯುಳ್ಳದ್ದಾಗಿದೆ. [3]E. Isaac, "1 (Ethiopic Apocalypse of) ENOCH" in *The Old Testament Pseudepigrapha*, vol. 1, *Apocalyptic Literature and Testaments*, ed. James H. Charlesworth (Garden City, N.Y.: Doubleday, 1983). ನೋಡಿರಿ ಅಧ್ಯಾಯಗಳು 46, 62, 63, 69-71. "ಮನುಷ್ಯ ಕುಮಾರನು" ದುಷ್ಟರ ಮೇಲೆ ನ್ಯಾಯ ತೀರಿಸುವ, ನೀತಿವಂತರನ್ನು ಸ್ಥಾಪಿಸಿಕೊಳ್ಳುವ ಹಾಗೂ ಅವರನ್ನು ಉನ್ನತಕ್ಕೇರಿಸುವ ಮತ್ತು ಮಹಿಮೆಯುಳ್ಳ, ಸಮಾಧಾನದೊಳಗೆ ತರುವ ಉದಾಹರಣೆಗಳು ನೋಡಿರಿ. [4]ಸಂಪೂರ್ಣ ಹಿನ್ನೆಲೆಗಾಗಿ ದಾನಿಯೇಲ 7 ಹೋಲಿಸು. [5]G. Ebeling, "The Beginnings of Christian Theology," *in Apocalypticism*, ed. R. W. Funk, *Journal for Theology and the Church* (New York: n.p., 1969), 6:58, quoted in D. S. Russell, *Apocalyptic: Ancient and Modern* (Philadelphia: Fortress, 1979), 51.

© 2009 Truth for Today